ಗಮನ ಸೆಳೆಯಂವ ಸೂಚನೆ

(೨) ಶೋರಾಪುರ ತಾಲ್ಲೂಕಿನ ಮಾಲಗತ್ತಿ ಮಂಡಲ ಪಂಚಾಯತಿ ಚುನಾವಣೆಯ ನಾಮಪತ್ರಗಳನ್ನು ಹರಿದು ಸುಟ್ಟಿರುವುದು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಠಕಲ್).—ಮಾನ್ಯ ಅಧ್ಯಕ್ಷರೆ, ಶೋರಾಪುರ ತಾಲ್ಲೂಕಿನ ಮಾಲಗತ್ತಿ ಮಂಡಲ ಪಂಚಾಯಿತಿ ಚುನಾವಣೆಯ ನಾಮಪತ್ರ ಹಾಗೂ ಇತರ ಚುನಾವಣಾ ಕಾಗದ ಪತ್ರಗಳನ್ನು ಹರಿದು ಸುಟ್ಟಿದ್ದರಿಂದ ಚುನಾವಣೆ ಮುಂದೂಡಿರುವ ವಿಷಯದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ ೯ನೇ ಜನವರಿ ೧೯೮೭ರಂದು ಮಧ್ಯಾಹ್ನ ೨-೪೫ ರಿಂದ ೩-೦೦ ಗಂಟೆಯ ಸಮಯದಲ್ಲಿ ಮಾಲಗತ್ತಿ ಮಂಡಲ ಪಂಚಾಯತ್ ಚುನಾವಣಾ ಅಧಿಕಾರಿಯವರು ಮಾಲಗತ್ತಿ ಮಂಡಲ ಪಂಚಾಯತ್ ಕಾರ್ಯಾಲಯದಲ್ಲಿ ಚುನಾವಣಾ ಕೆಲಸಗಳನ್ನು ನಿರ್ವಹಿಸುತ್ತಿರುವಾಗ ಕೆಲವು ದುಷ್ಕರ್ಮಿಗಳು ಅವರ ಕಾರ್ಯಾಲಯದಲ್ಲಿ ಆಕ್ರಮವಾಗಿ ಪ್ರವೇಶಿಸಿ ಅವರ ಮೇಜಿನ ಮೇಲೆ ಇದಲಾದ ಎಲ್ಲಾ ಅಭ್ಯರ್ಥಿಗಳ ನಾಮಪತ್ರ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಕಾಗದ ಪತ್ರಗಳನ್ನು ಅಲ್ಲದೆ, ಇತರ ಮುಖ್ಯವಾದ ಕಾಗದ ಪತ್ರಗಳನ್ನು ಕಸಿದುಕೊಂಡು ಅವರ ಕಛೇರಿಯ ಹೊರಗಡೆ ಸುಟ್ಟು ಹಾಕಿರುತ್ತಾರೆ. ಚುನಾವಣಾಧಿಕಾರಿಯವರು ಸ್ಥಳೀಯವಾಗಿ ವಿಚಾರ ಮಾಡಲು, ಈ ಕೆಳಗೆ ಕಾಣಿಸಿದ ವ್ಯಕ್ತಿಗಳು ಈ ಘಟನೆಯಲ್ಲಿ ಭಾಗವಹಿಸಿದ್ದರೆಂಬುದು ತಿಳಿದು ಬಂದಿದೆ ಎಂದು ಪರವಿ ಮಾಡಿದ್ದಾರೆ.

೧) ಶ್ರೀ ಶಂಕರ ತಂದೆ ಪಟ್ಟಪ್ಪ, ನಗನೂರು

೨) ಶ್ರೀ ದೇವೇಂದ್ರಪ್ಪ ತಂದೆ ಮಲ್ಲಪ್ಪ, ಸಾ : ಗೌಡಗೇರಿ,

೩) ಶ್ರೀ ಹನುಮಂತರಾಯ ತಂದೆ ಭೀಮರಾಯ ಮೇಟಿ, ಸಾ : ಗೌಡಗೇರಿ,

೪) ಶ್ರೀ ಶಂಕರಗೌಡ ತಂದೆ ಪಳ್ಳೆಪ್ಪ ವನಿಕಪಾಳ್ (ಪತ್ರಿ) ಸಾ : ಗೌಡಗೇರಿ,

ಈ ಘಟನೆಯ ಬಗ್ಗೆ ಮಾಲಗತ್ತಿ ಮಂಡಲ ಪಂಚಾಯತ್ ಚುನಾವಣಾಧಿಕಾರಿಯವರು ತಕ್ಷಣವೇ ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಿದ್ದಾರೆ, ಮತ್ತು ಶೋರಾಪುರ ತಾಲ್ಲೂಕಿನ ಕೆಂಭಾವಿ ಉಪ ಆರಕ್ಷಕರ ನಿರೀಕ್ಷಕರಿಗೆ ದೂರನ್ನು ಸಲ್ಲಿಸಿದ್ದಾರೆ.

ಈ ಸಂಬಂಧದಲ್ಲಿ ಪೋಲೀಸರು ಎಫ್.ಐ.ಆರ್. ಅನ್ನು (ನಂ. ೨/೮೭, ದಿನಾಂಕ ೯ನೇ ಜನವರಿ ೧೯೮೭) ದಾಖಲು ಮಾಡಿಕೊಂಡು ಮೇಲೆ ನಮೂದಿಸಿದ ನಾಲ್ಕು ಜನರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು, ಹಾಗೂ ಮುಂದಿನ ವಿಚಾರಣೆ ನಡೆಸುತ್ತಿದ್ದಾರೆ.

ಮೇಲಿನ ಕಾರಣಗಳಿಂದಾಗಿ ನಿಗದಿತ ದಿನದಂದು ಸದರಿ ಮಂಡಲ ಪಂಚಾಯತಿಗೆ ಚುನಾವಣೆಯನ್ನು ನಡೆಸಲಾಗಲಿಲ್ಲ. ದಿನಾಂಕ ೨೨ನೇ ಫೆಬ್ರವರಿ ೧೯೮೭ರಂದು ಚುನಾವಣೆಯನ್ನು ನಡೆಸಲು ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಯವರಿಗೆ ಸೂಚನೆ ನೀಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಮಗೆ ಉತ್ತರದ ಪ್ರತಿಗಳೇ ಬಂದಿಲ್ಲ.

ಅಧ್ಯಕ್ಷರು.—ಕಳುಹಿಸಿಕೊಡುತ್ತಾರೆ. ಉತ್ತರ ಬಂದ ಕೂಡಲೇ ಎಲ್ಲರಿಗೂ ಒಂದೊಂದು ಪ್ರತಿ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನಗೌಡ ಖರ್ಗೆ.—ಅಧ್ಯಕ್ಷರೆ, ಇದರಲ್ಲಿ ಬಾಣಂಗಡೆಯೆಂದರೆ ಏನಾ ಮಾತ್ರಗಳು ಸ್ವಲ್ಪ ವಿವರ ಕೊಡಬೇಕು. ಸುಪಾರಿ ರಿಟರ್ನಿಂಗ್ ಆಫೀಸರನ್ನು ಯಾವಾನಿಮಸ್ ಆದನಂತರ ಶಂಕರಪ್ಪ ತಂದೆ ಪುಟ್ಟಪ್ಪ ಅವರು, ಜಿಲ್ಲಾಪರಿಷತ್ ಸದಸ್ಯರು, ಜನತಾ ಪಕ್ಷಕ್ಕೆ ಸೇರಿದವರು, ಸ್ವಲ್ಪ ಪ್ರಭಾವವುಳ್ಳವರು ಅವರು ಆ ಕಚೇರಿಯಲ್ಲಿ ರಿಟರ್ನಿಂಗ್ ಆಫೀಸರ್ ಹತ್ತಿರ ಹೋಗಿ ಇರತಕ್ಕ ನಾಮಿನೇಷನ್ ಪೇಪರ್‌ಗಳನ್ನು ಕಸಿದುಕೊಂಡು ಅಲ್ಲಿರತಕ್ಕ ಅಧಿಕಾರಿಗಳಿಗೆ ಹೆದರಿಸಿ ಅಲ್ಲೇ

ಹರಿದು ಹೊರಗೆ ತಂದು ಅದಕ್ಕೆ ಬೆಂಕಿ ಹಚ್ಚಿದರು. ನಂತರ ಆಲ್ಲಿರತಕ್ಕ ಕಾನ್‌ಸ್ಟೇಬಲ್, ರಿಟರ್ನಿಂಗ್ ಆಫೀಸರ್ ಮತ್ತು ಕ್ಲರ್ಕ್‌ಗಳಿಗೆ ಸಿಕ್ಕಾಪಟ್ಟೆ ಬೈದು ಪೇಪರೆಲ್ಲಾ ಸುಟ್ಟಿಹಾಕಿ ಘೋಷಣೆ ಕೂಗಿಕೊಂಡು ಹೋದರು. ತದನಂತರ ಸಂಬಂಧಪಟ್ಟ ಜ್ಯುರಿಸ್‌ಡಿಕ್ಷನ್‌ನಲ್ಲಿ ಇರತಕ್ಕ ಸಬ್-ಇನ್ಸ್‌ಪೆಕ್ಟರ್ ಏನಿದ್ದಾರೆ ಎ.ಎಸ್. ಪಾಟೀಲ್ ಎಂದು, ಅವರಿಗೆ ಇದರ ಬಗ್ಗೆ ದೂರನ್ನು ಕೊಟ್ಟಾಗ ಅವರು ಇವರನ್ನು ಹಿಡಿಯಲಿಲ್ಲ. ಕಾರಣ ಇಷ್ಟೆ ಎ.ಎಸ್. ಪಾಟೀಲ್ ಮತ್ತು ಶಂಕರಪ್ಪ ತಂದೆ ಪುಟ್ಟಪ್ಪ ಇವರಿಬ್ಬರೂ ಕ್ಲಾಸ್‌ಮೆಟ್ಸ್. ಆದಕ್ಕೆ ಅವರು ಕಂಪ್ಲೇಂಟ್ ತೆಗೆದುಕೊಳ್ಳದೆ ಸುಮ್ಮನೆ ಕುಳಿತರು. ಕೊನೆಗೆ ಜನ ಒತ್ತಾಯ ಮಾಡಿದ ಮೇಲೆ, ಅಲ್ಲಿನ ಶಾಸಕರು ಈ ರೀತಿ ಅನ್ಯಾಯವಾದರೆ ಫೇರ್ ಎಲೆಕ್ಷನ್ ಆಗುವುದಿಲ್ಲ ಎಂದು ಈ ರೀತಿ ನಾಮಿನೇಷನ್ ಪೇಪರ್ ರಿಸ್ಕ್ಯಾಯ್ ಮಾಡತಕ್ಕದ್ದು ಯಾವ ನ್ಯಾಯ ಎಂದು ಕೇಳಿದಾಗ, ಒತ್ತಾಯ ಮಾಡಿದ ಮೇಲೆ ಎ.ಎಸ್. ಪಾಟೀಲ್ ಅವರು ಒಂದು ಕೇಸನ್ನು ೯ನೇ ತಾರೀಖು ರಿಜಿಸ್ಟರ್ ಮಾಡಿದರು.

ಶ್ರೀ ಅಬ್ದುಲ್ ನಜೀರ್ ಸಾಬ್.—ಘಟನೆ ನಡೆದಿರುವುದೂ ೯ನೇ ತಾರೀಖು. ರಿಜಿಸ್ಟರ್ ಆಗಿರುವುದೂ ೯ನೇ ತಾರೀಖು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬೇಲಬಲ್ ಅಪೆನ್ಸ್ ಹಾಕಿ ಎಫ್.ಐ.ಆರ್. ಕಳುಹಿಸಿದರು. ತದನಂತರ ತಮ್ಮ ಗಮನಕ್ಕೆ ತರುತ್ತೇನೆ, ಅವರು ಸೆಕ್ಷನ್ ೫೦೬ ಮತ್ತು ೫೦೪ರಲ್ಲಿ ರಿಜಿಸ್ಟರ್ ಮಾಡಬೇಕಾದ ಕೇಸನ್ನು ಸೆಕ್ಷನ್ ೪೨೮ ಮತ್ತು ೪೫೨ರಲ್ಲಿ ಮಾಡಿ ಕೈಬಿಟ್ಟರು. ತದನಂತರ ಎಸ್.ಪಿ. ಯವರಿಗೆ ಹೇಳಿದ ಮೇಲೆ ಎಸ್.ಪಿ.ಯವರು ಇಂಥ ಅನ್ಯಾಯ ನಡೆಯಬಾರದು ಎಂದು ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಯವರು ಖುದ್ದಾಗಿ ಇವರಲ್ಲಿ ಆಸಕ್ತಿ ವಹಿಸಿ ಐ.ಪಿ.ಸಿ. ಸೆಕ್ಷನ್ ೫೦೪, ೫೦೬ ಪ್ರಕಾರ ಇದು ಬರುತ್ತದೆ ಎಂದು ಹೇಳಿದಾಗ ಅವರ ಒತ್ತಾಯದ ಮೇರೆಗೆ ಸಬ್-ಇನ್ಸ್‌ಪೆಕ್ಟರ್ ಅವರು ಕೇಸನ್ನು ರಿಜಿಸ್ಟರ್ ಮಾಡಬೇಕಾಯಿತು. ಅದಕ್ಕೆ ಮುಂಚೆ ಆಲ್ಲಿರತಕ್ಕ ಅಪರಾಧಿ ಎಂದರೆ ಶ್ರೀಮಾನ್ ಶಂಕರಪ್ಪನವರಿಗೆ ಹೇಳಿದ್ದಾರೆ. ದೂರು ಮೇಲಿನವರೆಗೆ ಹೋಗಿದೆ, ಡೆಪ್ಯುಟಿ ಕಮಿಷನರ್ ಮತ್ತು ಎಸ್.ಪಿ.ಯವರೆಗೆ ಗೊತ್ತಾಗಿದೆ. ಆದ್ದರಿಂದ ಸ್ಥಳಗಳಲ್ಲಿ ಇರಬೇಡಿ ಎಂದು ಬೇಲ್ ತೆಗೆದು ಕೊಳ್ಳುವುದಕ್ಕೆ ಗುಲ್ಬರ್ಗಕ್ಕೆ ಕಳುಹಿಸಿದ್ದಾರೆ. ಈ ರೀತಿ ಸಬ್-ಇನ್ಸ್‌ಪೆಕ್ಟರ್ ಹಸ್ತಕ್ಷೇಪ ಮಾಡಿ ಈ ಚುನಾವಣೆಯಲ್ಲಿ ಅವರಿಗೆ ಸಹಾಯ ಮಾಡತಕ್ಕ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ ಮಂಡಲ ಪಂಚಾಯಿತಿ ಎಲೆಕ್ಷನ್ ಆಲ್ಲಿ ಪೋಸ್ಟ್‌ಪೋನ್ ಆಗಿದೆ. ಆದರೆ ಆ ಸಬ್-ಇನ್ಸ್‌ಪೆಕ್ಟರ್ ಅಲ್ಲೇ ಇದ್ದಾರೆ. ಅವನನ್ನು ಈ ಒಂದು ಕಾರಣದ ಮೆಲೆ ಅಲ್ಲಿಂದ ತೆಗೆಯದೇ ಹೋದರೆ ಅಥವಾ ಸಸ್ಪೆಂಡ್ ಮಾಡದೇ ಹೋದರೆ ಫೇರ್ ಎಲೆಕ್ಷನ್ ಆಗುವುದಿಲ್ಲ ಈಗಾಗಲೇ ಅದನ್ನು ಜನರಿಗೆ ಹೆದರಿಸುತ್ತಿದ್ದಾರೆ. ನಸಗೇನು ಮಾಡ್ತೀರಿ ನೀವು ನಾನೆಲ್ಲಾ ನೋಡಿಕೊಳ್ಳುತ್ತೇನೆ, ಶಂಕರಪ್ಪ ಏನು ಹೇಳುತ್ತಾರೋ ಅದೇ ನಾನು ಮಾಡುತ್ತೇನೆ ಎಂದು ಹೇಳುತ್ತಿದ್ದಾನೆ. ನಾಮಿನೇಷನ್ ಪೇಪರ್ ದಾಖಲು ಮಾಡುವುದಕ್ಕೆ ಯಾರಾದರೂ ಹೋದರೆ ಅವರ ಮನೆಗೆ ಹೋಗಿ ಸೆಕ್ಷನ್ ೧೦೭ ಪ್ರಕಾರ ಕೇಸ್ ಹಾಕುವುದು, ಕರೆಯಿಸುವುದು, ಸಾಯಂಕಾಲದವರೆಗೆ ಕೂರಿಸುವುದು, ಈ ರೀತಿಯಾಗಿ ಅನ್ಯಾಯ ಮಾಡುತ್ತಿದ್ದಾನೆ. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ತಕ್ಷಣ ಆ ಪೋಲೀಸ್ ಅಧಿಕಾರಿಯನ್ನು ಆಲ್ಲಿಂದ ತೆಗೆದುಹಾಕಬೇಕು. ಸೆಕ್ಷನ್ ೫೦೪, ೫೦೬ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಬೇಕಾಗಿದ್ದರೂ ಅದು ಮಾಡಿಲ್ಲ ಅದರ ಬಗ್ಗೆ ತಾವು ಪರಿಶೀಲಿಸಿ ಡೈರೆಕ್ಷನ್ ಕೊಡಬೇಕಾಗುತ್ತದೆ ಮತ್ತು ಆಲ್ಲಿಯೇ ಆ ಸಬ್-ಇನ್ಸ್‌ಪೆಕ್ಟರ್ ಇದ್ದರೆ ಅನ್ಯಾಯವಾಗುತ್ತದೆ. ಅದಕ್ಕೆ ತಕ್ಷಣ ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಸನ್ಮಾನ್ಯ ಅಧ್ಯಕ್ಷರೆ. ಮೂಲಗಿತ್ತಿ ಮಂಡಲ್ ಪಂಚಾಯಿತಿ ಚುನಾವಣೆಯಲ್ಲಿ ನಾಮಪತ್ರಗಳನ್ನು ಸುಟ್ಟು ಹಾಕಿದ್ದು ನಿಜ ಅದಕ್ಕೆ ಇದ್ದಂತಹ ಕಾರಣವೇನು ? ಮತ್ತು ಏನು ಹಿನ್ನಲೆ ಇತ್ತು ಎನ್ನುತಕ್ಕಂತಹ ಮಾತನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ನಾಮಿನೇಷನ್ ಪತ್ರಗಳ ಸ್ಕ್ರುಟಿನಿ ಆಗುವ ದಿವಸ ಚುನಾವಣಾಧಿಕಾರಿ ಬೆಳಿಗ್ಗೆ ಯಾರು ಇದಿದ್ದಿಲ್ಲ ಅವರದನ್ನು ರಿಜೆಕ್ಟ್ ಮಾಡಿ ನಾಮಿನೇಷನ್ ಪತ್ರವನ್ನು ಸ್ಕ್ರುಟಿನೈಸ್ ಮಾಡಿ ಅದರ ಪಟ್ಟಿಯನ್ನು ಹಚ್ಚಿದರು. ಆ ರೀತಿ ಹಚ್ಚಿದ ಪಟ್ಟಿ ಬೆಳಗ್ಗೆಯಾಗುವುದರೊಳಗೆ ಬದಲಾವಣೆಯಾಯಿತು ನಂತರ ನಾಮಪತ್ರಗಳನ್ನು ವಾಪಸ್ಸು ತೆಗೆದುಕೊಳ್ಳುವ ದಿವಸ ಮೂರೂವರೆ ಗಂಟೆಯ ನಂತರವೂ ಕೂಡ ಈ ಚುನಾವಣಾಧಿಕಾರಿ ಕಾಂಗ್ರೆಸ್‌ನ ಕೆಲವು ಪ್ರಮುಖರು ಕೆಲವರನ್ನು ಕರದುಕೊಂಡು ಜನತಾ ಪಕ್ಷದ ನಾಮಪತ್ರಗಳನ್ನು ವಾಪಸ್ಸು ತೆಗೆಸಿದರು. ವಾಪಸ್ಸು ತೆಗೆದುಕೊಳ್ಳುವ ಕಾಲದಲ್ಲಿ ಆಲ್ಲೇ ಇದ್ದಂತಹ ಅನೇಕ ಜನರು ಟೈಪಾಗಿದೆ ಎಂಬುದಾಗಿ ಹೇಳುತ್ತಿದ್ದರೂ ಅದನ್ನು ಗಮನಕ್ಕೆ ತೆಗೆದು ಕೊಳ್ಳದೇ ನಾಮಪತ್ರಗಳನ್ನು ವಾಪಸ್ಸು ತೆಗೆಯಿಸಿದರು. ಇದಕ್ಕೆ ಹಿನ ಲೆ ಈ ಚುನಾವಣಾಧಿಕಾರಿ.

ಬಹುತೇಕ ಅವರ ಹೆಸರು ಹನುಮಂತಪ್ಪ ಎಂದು ಕಾಣುತ್ತದೆ. ಅವರು ಕಾಂಗ್ರೆಸ್ ಟೀಮಿನಲ್ಲಿ ಕುಳಿತು ಸ್ಕ್ರೂಟಿನೈಸ್ ಆದ ದಿವಸ ಹೋಗಿದ್ದಾರೆ. ಈ ಚುನಾವಣಾಧಿಕಾರಿ ಅವರ ಜೊತೆ ಶಾಮಿಲಾಗಿ ಈ ಕೆಲಸವನ್ನು ಮಾಡಿದ್ದಾನೆ.

ಶ್ರೀ ಎಂ. ಪುಲ್ಲಿಕಾರ್ಜುನ ಖಿರ್ಗೆ.—ಅವರು ಮಾಡಿರುವಂತ ಅನ್ಯಾಯವನ್ನು ಇನ್ನಾರು ಮಾಡಲಿಕ್ಕಿಲ್ಲ. ಅದನ್ನು ಬೇಕಾದರೆ ಸ್ಪಷ್ಟಪಡಿಸುತ್ತೇನೆ. ನಾನು ಹೇಳುವುದು ಇಷ್ಟೆ accused is there. ಅವರಿಗೆ ಶಿಕ್ಷೆ ಕೊಡಿ, ಅನ್ಯಾಯವಾಗಿದ್ದರೆ ಅವರು ಕೋರ್ಟಿಗೆ ಹೋಗಬಹುದು. ಅದನ್ನು ಬಿಟ್ಟು ಇವರ ರಾಜಕೀಯ ಭಾಷಣವನ್ನು ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ನಾನೂ ಆ ರೀತಿ ಪೇಳಬೇಕಾಗುತ್ತದೆ. ಆದ್ದರಿಂದ ಪಾಸ್ಯ ಸದಸ್ಯರು ವಿವರಣೆಯನ್ನು ಆಷ್ಟೇ ಕೇಳಬೇಕು.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ನಾನು ಅದರ ಹಿನ್ನೆಲೆಯನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಪುಲ್ಲಿಕಾರ್ಜುನ್ ಖಿರ್ಗೆ.— ಈ ಸ್ಟೇಟ್‌ಮೆಂಟ್ ಬಗ್ಗೆ ವಿವರಣೆಯನ್ನು ಕೇಳಬೇಕು. ಅವರು ಮಾಡಿರುವಂತಹ ಅನ್ಯಾಯಗಳ ಬಗ್ಗೆ ನನ್ನ ಹತ್ತಿರವೂ ವಿವರಗಳು ಇವೆ. ಇವರು ಮಾಡಿರುವಂತಹ ಅನ್ಯಾಯಗಳನ್ನು ನೋಡಿದರೆ ಯಾರೂ ಬದುಕುವ ಹಾಗೆಯೇ ಇಲ್ಲ. ಅಂತಹ ಅನ್ಯಾಯವನ್ನು ಮಾಡಿದ್ದಾರೆ. ಇದ್ದಂತಹ ಹಿನ್ನೆಲೆಯನ್ನು ಹೇಳಿದೆ. ಆ ದಿವಸ ಜನ ಬಹಳ ಸೇರಿದ್ದರಾ ಘರ್ಷಣೆಯಾದದ್ದು ನಿಜ. ಈ ಚುನಾವಣಾಧಿಕಾರಿ ಕಾಂಗ್ರೆಸ್‌ನವರ ಜೊತೆ ಶಾಮಿಲಾಗಿ, ಹೀಗಾದರೆ ಸರಿಹೋಗುವುದಿಲ್ಲ ಎಂಬುದಾಗಿ ತಿಳಿದು ಇಡೀ ಆ ಭಾಗದ ಮಂಡಲ್ ಪಂಚಾಯಿತಿ ಚುನಾವಣೆಯೇ ಆಗದ ಹಾಗೆ ಮಾಡಿದ್ದಾರೆ. ಅದಕ್ಕಾಗಿ ಈ ಒಂದು ಘಟನೆ ಏನಿದೆ ಅದನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು. ಎರಡನೆಯದಾಗಿ, ಈ ಚುನಾವಣಾಧಿಕಾರಿ ನಾಮಪತ್ರಗಳನ್ನು ಸ್ಕ್ರೂಟಿನೈಸ್ ಮಾಡಿ ಹಚ್ಚಿದ್ದಂತಹ ಪಟ್ಟಿಯನ್ನೇ ಮಾರನೆಯ ದಿವಸ ಬದಲಾವಣೆ ಮಾಡಿದ್ದಾನೆ. ಅದರ ಬಗ್ಗೆಯೂ ಕೂಡ ಸೂಕ್ಷ್ಮ ಪರಿಶೀಲನೆ ಮಾಡಬೇಕೆಂಬುದು ನನ್ನ ವಾದ. ಈ ಘಟನೆಯ ಬಗ್ಗೆ ಶ್ರೀ ಶಂಕರ್ ಮಣಕಲ್ ಮೇಲೆ ಆರೋಪ ಮಾಡಲಾಗಿದೆ. ಅವರಿಗೂ ಈ ಘಟನೆಗೂ ಏನೂ ಸಂಬಂಧ ಇಲ್ಲ. ಅವರು ಜಿಲ್ಲಾಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಿದ್ದಾರೆ. ಇವರನ್ನೂ ಇದರಲ್ಲಿ ಇನ್ವಾಲ್ವ್ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಘಟನೆ ನಡೆಯುವಂತಹ ಸಮಯದಲ್ಲಿ ಶ್ರೀ ಶಂಕರ್ ಮಣಕಲ್ ಅಲ್ಲಿರಲೇ ಇಲ್ಲ. ಅವರು ಊರಿಗೆ ಹೋದ ಮೇಲೆ ಈ ಘಟನೆ ನಡೆದಿದೆ. ಅದನ್ನು ಪರಿಶೀಲನೆ ಮಾಡಬೇಕು. ಪೋಲೀಸ್ ಅಧಿಕಾರಿಗಳು ಇವರಿಗೆ ಕೇವಲ ಜಾಮೀನನ್ನು ಕೊಡಬಾರದು ಎಂಬ ದೃಷ್ಟಿ ಇದ್ದುದರಿಂದ ಅವರು ನಿರೀಕ್ಷಣಾ ಜಾಮೀನು ತೆಗೆದುಕೊಂಡಿದ್ದಾರೆ. ಆ ರೀತಿ ನಿರೀಕ್ಷಣಾ ಜಾಮೀನು ತೆಗೆದುಕೊಂಡಿದ್ದರೂ ೧೦೭ನೇ ಸೆಕ್ಷನ್ ಮೇಲೆ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಬೇಕು ಎನ್ನುವಂತಹ ಸೂಚನೆಯನ್ನು ಪೋಲೀಸ್ ಅಧಿಕಾರಿಗಳು ಕೊಟ್ಟಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಬೇಕು.

ಶ್ರೀ ಮದನಗೋಪಾಲ್ ನಾಯಕ್ (ಶೋರಾಪುರ).—ಸನ್ಮಾನ್ಯ ಅಧ್ಯಕ್ಷರೆ, ಮಾಲಗತ್ತಿ ಗ್ರಾಮದಲ್ಲಿ ಏನೊಂದು ಘಟನೆ ನಡೆದಿದೆ, ಅದು ನಡೆದ ಮೇಲೆ ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲಿ ಚುನಾವಣಾ ಅಧಿಕಾರಿಯಾಗಿದ್ದ ಶ್ರೀ ಹನುಮಂತರಾಯ ಅವರು ತಮ್ಮ ಮೇಲೆ ಏಸಗಿರತಕ್ಕ ದೌರ್ಜನ್ಯದ ದಾಖಲೆಯನ್ನು ಪೋಲೀಸ್‌ನವರು ಫೈಲ್ ಮಾಡಿದ್ದಾರೆ. ಅವರು ಆಪತ್ತಿನ ದಿವಸವೇ ಪೋಲೀಸ್‌ಸ್ಟೇಷನ್‌ಗೆ ಹೋಗಿದ್ದಾರೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಸ್ಥಳದಲ್ಲಿ ಹರಿದಂತಹ ಕಾಗದಪತ್ರಗಳ ಜೂರುಗಳು ಇಲ್ಲಿವೆ (ಕಾಗದಪತ್ರಗಳ ಚೂರುಗಳನ್ನು ಸಭೆಗೆ ತೋರಿಸಿದರು) ನಾಮಿನೇಷನ್ ಪೇಪರ್ಸ್, (ಬಿ) ಫಾರಂ ಮತ್ತು ವಿತ್‌ಡ್ರಾ ಫಾರಂಗಳನ್ನು ಹರಿದು ಹಾಕಿದ್ದಾರೆ. ಅಲ್ಲಿ ಯಾವ ರೀತಿ ಗಲಾಟೆಯಾಗಿದೆ ಎಂಬುದರ ಬಗ್ಗೆ ಶಬ್ದಗೆ ಪೋಟೋವನ್ನು ತೋರಿಸಿದ್ದೇನೆ. ಈಗಾಗಲೇ ನಮ್ಮ ಹಿರಿಯ ಸದಸ್ಯರಾದ ವಿಶ್ವನಾಥರೆಡ್ಡಿಯವರು ಹೇಳಿದರು, ರಾಜಕೀಯವಾಗಿ ನಾವು ಯಾವುದನ್ನೂ ಮಾತಾಡಲಿಕ್ಕೆ ಹೋಗಿಲ್ಲವೆಂದು ಅವರು ಹೇಳಿದರು. ನಾನು ಆ ಬಗ್ಗೆ ಪ್ರತಿಕ್ರಿಯಾ ಹೇಳಿಕೆಯನ್ನು ಕೊಟ್ಟಿದ್ದೇನೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕೆಂದು ಕೇಳುತ್ತಿದ್ದೇನೆ. ಮಾನ್ಯ ವಿಶ್ವನಾಥರೆಡ್ಡಿಯವರು ಶಂಕರಮಣಿಕೇರಿಯವರು ಈಗ ಜಿಲ್ಲಾಪರಿಷತ್ ಸದಸ್ಯರಾಗಿದ್ದಾರೆ, ಅವರು ಅಲ್ಲಿರಲಿಲ್ಲ. ಅವರ ನೇತೃತ್ವದಲ್ಲಿ ನಾನೂ ಆಗಿಲ್ಲವೆಂದು ಹೇಳುತ್ತಿದ್ದಾರೆ. ಈ ಘಟನೆಯಾಗಲಿಕ್ಕೆ ಕಾರಣ, ಶಂಕರಮಣಿಕೇರಿಯವರು ಜಿಲ್ಲಾಪರಿಷತ್ ಸದಸ್ಯರಾಪು ಆರಿಸಿ ಬಂದ ಕೆಲಂಪೊದು ದಿವಸ ಎಂದರೆ ಮಾರನೆಯ ದಿವಸ ಯಾರು ಯಾರು ಅವರಿಗೆ ಓಟು, ಕೊಟ್ಟಿಲ್ಲ. ರಾಜಕೀಯವಾಗಿ ಹೇಳಬೇಕಾದರೆ ಕಾಂಗ್ರೆಸ್ ಪಕ್ಷಕ್ಕೆ ಯಾರು ಓಟು ಕೊಟ್ಟವರ್ಯಾರೆ ಅವರುಗಳನ್ನು ರಾತ್ರಿ ಸಮಯದಲ್ಲಿ ಕುಡಿದಂತಹ ಜನ ಟ್ರಾಕ್ಟರ್‌ನಲ್ಲಿ ಬಂದು ಅವರ ಊರುಗಳಿಗೆ ಹೋಗಿ ರೈತರಿಗೆ, ಕಾರ್ಮಿಕರಿಗೆ ಹೆಂಗಸರಿಗೆ ಹೊಲಸು ಮಾತುಗಳಿಂದ ಬೈದಿದ್ದಾರೆ.

ಅಧ್ಯಕ್ಷರು.—ಸರ್ಕಾದವರು ಏನು ಮಾಡಬೇಕು ಅದನ್ನು ಹೇಳಿ.

ಶ್ರೀ ಮದನಗೋಪಾಲ ನಾಯಕ್.—ಅವರು ರಾಜಕೀಯವಾಗಿ ಹೇಳಿದ್ದಾರೆ, ನಾನು ಹೇಳುತ್ತಿದ್ದೇನೆ. ಜನರ ಮೇಲೆ ಅತ್ಯಾಚಾರ ಮಾಡತಕ್ಕದ್ದನ್ನು ನೋಡಿದರೆ, ಮಾಲಗತ್ತಿಯಲ್ಲಿ ಮಂಡಲ ಪಂಚಾಯತಿ ಚುನಾವಣೆಯಲ್ಲಿ ೨೧ ಸೀಟುಗಳಲ್ಲಿ ೧೬ ಸೀಟುಗಳು ಅನ್ ಆಪೋಸ್ ಆಗಿ ಆಯ್ಕೆಯಾದುದರಿಂದ ಶಂಕರಮೂರ್ತಿಯವರು ಹತಾಶರಾಗಿ ಈ ರೀತಿಯ ಶಿಳಿಗೇಡಿತನಕ್ಕೆ ಕಾರಣರಾಗಿದ್ದಾರೆ.

ಅಧ್ಯಕ್ಷರು.—ನೀವು ಸರ್ಕಾರದಿಂದ ಏನು ಎಕ್ಸ್‌ಪೆಕ್ಟ್ ಮಾಡುತ್ತೀರಿ ?

ಶ್ರೀ ಮದನಗೋಪಾಲ್ ನಾಯಕ್.—ಈ ಸರ್ಕಾರ, ಒಬ್ಬ ಸರ್ಕಾರಿ ಅಧಿಕಾರಿ ದಬ್ಬಾಳಿಕೆ ಮಾಡುವಾಗ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ ? ಎಸ್. ಎಸ್. ಪಾಟೀಲ್. ಎಂಬ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಇದಕ್ಕೆ ಕಾರಣ

ಅಧ್ಯಕ್ಷರು.—ನೀವು ಇಲ್ಲಿ ರಾಜಕೀಯ ಬೆರಸಬೇಡಿ.

ಶ್ರೀ ಮದನಗೋಪಾಲ್‌ನಾಯಕ್.—ಅವರು ರಾಜಕೀಯವಾಗಿ ಹೇಳಿದ್ದಾರೆ ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ಘಟನೆಯ ಹಿನ್ನೆಲೆಯನ್ನು ಹೇಳುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಚರ್ಚೆಯಾಗಬೇಕಾದರೆ ಬೇರೆ ರೀತಿ ತಾವು ಚರ್ಚೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳುವಾಗ ಇವರು ಸುಮ್ಮನೆ ಕುಳಿತು ಕೊಂಡಿದ್ದರು. ಅವರು ಲೋಕಲ್ ಶಾಸಕರಿದ್ದಾರೆ, ಗ್ರೌಂಡ್ಸ್ ಅವರಿಗೆ ಗೊತ್ತಿದೆ ಹೇಳುತ್ತಾರೆ ಸ್ವಲ್ಪ ಕೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಉಪನಾಯಕರು ಹೇಳಿದ್ದನ್ನು ನಾನು ಕೇಳಿದ್ದೇನೆ. ಕ್ಲಾರಿಫಿಕೇಶನ್ ಏಂದು ಹೇಳಿ ಒಂದೂವರೆ ಗಂಟೆ ಚರ್ಚೆಮಾಡಿದರೆ ನಾವೇನು ಹೇಳಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಏನೋ ಹೇಳುತ್ತಿದ್ದಾರೆ, ತಾವು ಸ್ವಲ್ಪ ಸಮಾಧಾನದಿಂದ ಇರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಾಜಕೀಯ ವ್ಯಕ್ತಿಗಳಿದ್ದಾರೆ, ಕ್ರಮ ತೆಗೆದು ಕೊಳ್ಳುತ್ತಾರೆಯೆ ? ಅನ್ಯಾಯವಾಗಿದೆ, ಪಕ್ಷದ ಮೇಲೆ ಬಂದಿದೆಯೆಂದು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಹೋದರೆ ಹೇಗೆ ?

ಅಧ್ಯಕ್ಷರು.—ಮಾನ್ಯಸದಸ್ಯರು ಭಾಷಣ ಮಾಡುವುದುಬೇಡ. ಕ್ಲಾರಿಫಿಕೇಶನ್ ಕೇಳಿ, ಮಂತ್ರಿಗಳ ಉತ್ತರ ಹೇಳಿದ್ದಾರೆ. ಇದು ಕಾಲಿಂಗ್ ಅಟೆನ್‌ಷನ್ ಮಂತ್ರಿಗಳು ಉತ್ತರ ಹೇಳಿದ್ದಾರೆ. ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ಮಾಲಗತ್ತಿಯಲ್ಲಿ ಮರು ಚುನಾವಣೆ ಇದೆಯೆಂದು ಹೇಳಿದ್ದಾರೆ, ಕೆಲವರ ಮೆಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆಂದು ಹೇಳಿದ್ದಾರೆ. ಪಕ್ಷಗಳ ಬಗ್ಗೆ ಮಾತನಾಡಲಿಕ್ಕೆ ಹೋಗಬೇಡಿ, ಏನಾಗಬೇಕು ಅದನ್ನು ಕೇಳಿ.

ಶ್ರೀ ಮದನಗೋಪಾಲ ನಾಯಕ್.—ನಾನು ಪಕ್ಷಗಳ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ನಮ್ಮ ಹಿರಿಯಸದಸ್ಯರು ಹೇಳಿದ್ದಕ್ಕೆ, ಸರ್ಕಾರ ಉತ್ತರ ಕೊಟ್ಟಿರುವುದಕ್ಕೆ, ಅದರ ಮೇಲೆ ಹೇಳುತ್ತಿದ್ದೇನೆ. ನಮ್ಮ ಪಕ್ಷದ ಮೇಲೆ ಅವರು ಅಪಾದನೆ ಮಾಡಿದ್ದರಿಂದ ನಾನು ಮಾತನಾಡಬೇಕಾಗಿದೆ. ಈ ಘಟನೆಗೆ ಸಂಬಂಧಪಟ್ಟ ವ್ಯಕ್ತಿಯ ಮೇಲೆ ಕೇಸ್ ದಾಖಲೆ ಮಾಡುವಾಗ ಪೀಪಲ್ಸ್ ಆಕ್ಟ್ ಪ್ರಕಾರ ನಾನ್‌ಬೇಲ್ ಮೇಲೆ ದಾಖಲು ಮಾಡಬೇಕಾಗಿತ್ತು ಇವರು ಬೇಲ್‌ಕೊಟ್ಟಿದ್ದಾರೆ. ಎಸ್, ಪಿ. ಯವರ ಜೊತೆಗೆ ನಾನು ಮತ್ತು ಶಿವಶಂಕರಪ್ಪಗೌಡ ರವರು ಮಾತನಾಡಿದ ಮೇಲೆ ಮತ್ತೊಂದು ಸಲ ಎಫ್. ಐ. ಆರ್. ಕಳುಹಿಸಿದ್ದಾರೆ. ಈ ರೀತಿಯ ಅನ್ಯಾಯ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಕಡೆಯಿಂದ ಆಗುತ್ತಾ ಇದೆ. ಹೊನ್ನೆ ಒಂದು ಕೇಸ್ ಬಂದಿದೆ, ಎ. ಪಿ. ಎಸ್. ಐ. ಯಿಂದ ಬಹಳ ತೊಂದರೆಯಾಗುತ್ತಿದೆ. ಇಂತಹವರಿಗೆ ಸಪೋರ್ಟ್ ಮಾಡುತ್ತಾ ಹೋದರೆ ಹೇಗೆ ?

ಅಧ್ಯಕ್ಷರು.—ತಮಗೆ ಏನಾಗಬೇಕು ಕೇಳಿ ?

ಶ್ರೀ ಮದನಗೋಪಾಲ ನಾಯಕ್.—ಅವರನ್ನು ತೆಗೆಯಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಅಧ್ಯಕ್ಷರೆ, ಶಂಕರಪಣಿಕೇರಿ ಎಂಬುವರು ಜಿಲ್ಲಾಪರಿಷತ್ ಸದಸ್ಯರಾಗಿದ್ದಾರೆ. ಈಗಾಗಲೇ ಅಲ್ಲಿನ ಚುನಾವಣಾ ಅಧಿಕಾರಿಗಳು ಅವರ ಬಗ್ಗೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಹೀಗಿದ್ದಾಗ ಅವರು ಕ್ರಿಮಿನಲ್ ಕೇಸ್ ಆಗುತ್ತದೆ. ಅವರಿಗೆ ಡಿಸ್‌ಕ್ವಾಲಿಫೈ ಏತಕ್ಕೆ ಮಾಡಬಾರದು ? ಎರಡನೆಯದಾಗಿ ರಾಜಕೀಯ ತರತಕ್ಕವರಿಗೆ ಎಚ್ಚರಿಕೆ ಏನೇ ಇರಲಿ, ರಾಜಕೀಯ ಬಂದರೆ ಮೊತ್ರ ಅವರಿಗೆ ಸಪೋರ್ಟ್ ಮಾಡತಕ್ಕ ಕೆಲಸ ಆಗಬಾರದು. ಯಾವುದೇ ಪಕ್ಷಪಾತವಿಲ್ಲದೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಮಾನ್ಯ ಮದನಗೋಪಾಲ್ ನಾಯಕ್ ಮತ್ತು ಶಿವಶಂಕರಪ್ಪಗೌಡರವರು ಹೇಳಿದಂತಹ ಪೊಲೀಸ್ ಅಧಿಕಾರಿಗೆ ಇವರ ಸಪೋರ್ಟ್ ಇದೆಯೆಂದು ಆತ ಅಲ್ಲಿ ಏನೇನೋ ಕೆಲಸ ಮಾಡುತ್ತಿದ್ದಾನೆ. ದಯವಿಟ್ಟು ಆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ನ್ನು ತೆಗೆದು ಹಾಕತಕ್ಕ ಕೆಲಸ ಆಗಬೇಕು.

ಶ್ರೀ ಶಿವಶಂಕರಪ್ಪಗೌಡ ಶಿರವಾಲ್.—(ಶಹಾಪುರ) ಮಾನ್ಯ ಅಧ್ಯಕ್ಷರೆ, ಮಾಲಗತ್ತಿ ಮಂಡಲ ಪಂಚಾಯತಿ ನನ್ನ ಮತದಾರ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ ನಡೆದಂತಹ ಘಟನೆಯ ಬಗ್ಗೆ ಮಾನ್ಯ ಖಾರ್ಗೆಯವರ ವಿವರವಾಗಿ ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯಸದಸ್ಯರು ಕ್ಲಾರಿಫಿಕೇಷನ್ ಮಾತ್ರ ಕೇಳಿಬೇಕು. ಎಲ್ಲಾ ವಿವರಗಳು ಆಗಲೇ ಬಂದಿವೆ. ಮಾನ್ಯ ಖಾರ್ಗೆಯವರು ಮತ್ತು ಸ್ವಾಮಿಯವರು ಯಾವರೀತಿ ಕೇಳಿದರು ಆ ರೀತಿ ಕೇಳಿ ?

ಶ್ರೀ ಶಿವಶಂಕರಪ್ಪಗೌಡ ಶಿರವಾಲ್.—ನನ್ನ ಮತದಾರರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ವಿಷಯ: ಜಿಲ್ಲಾಪರಿಷತ್ ಚುನಾವಣೆಯಲ್ಲಿ ಯಾವ ರೀತಿಯಾಗಿದೆ ಎನ್ನುವುದನ್ನು ಹೇಳುತ್ತೇನೆ. ತಾವು ಮಾತನಾಡಲಿಕ್ಕೆ ಸ್ವಲ್ಪ ಸಮಯ ಕೊಡಿ.

ಅಧ್ಯಕ್ಷರು.—ತಾವು ಚರ್ಚೆ ಮಾಡುವುದಕ್ಕೆ ಹೋಗಬೇಡಿ, ತಾವು ಹೊಸಬರಿದ್ದೀರಿ, ವಿವರವಾಗಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೊಸದಾಗಿ ಚುನಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಘಟನೆಯಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಏನು ಆಗಬೇಕೆಂದು ಕೇಳಿ.

ಶ್ರೀ ಶಿವಶಂಕರಪ್ಪಗೌಡ ಶಿರವಾಲ್.—ನಮಗೆ ಮಾತನಾಡಲಿಕ್ಕೆ ಸ್ವಲ್ಪ ಟೈಮ್ ಕೊಡಿ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ. ಮಾನ್ಯ ಮದನಗೋಪಾಲ್‌ನಾಯಕ್, ವೀರಯ್ಯ ಸ್ವಾಮಿಯವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ, ಆ ತರಹ ನೀವೂ ಕೇಳಿ.

ಶ್ರೀ ಶಿವಶಂಕರಪ್ಪಗೌಡ ಶಿರವಾಲ್.—ನನಗೆ ಸಂಬಂಧಪಟ್ಟ ವಿಷಯ, ನಡೆದಂತಹ ದುರ್ಘಟನೆಗೆ ಏನಿದೆ ಅದಕ್ಕೆ ಎಸ್. ಎಸ್. ಪಾಟೀಲ್ ಸಬ್‌ಇನ್ಸ್‌ಪೆಕ್ಟರ್ ಆತನ ಕೈವಾಡವಿದೆ. ಆತ ಚುನಾವಣೆ ದಿವಸ ೧೫ಸಾವಿರ ರೂಪಾಯಿಗಳನ್ನು ಕೊಟ್ಟು ಜೀಪು ಕೊಟ್ಟು ಚುನಾವಣೆ ಮಾಡಿಸಿದ್ದಾನೆ. ಯಾರು ಯಾರು ಏನದು ಮಾಡಿದ್ದಾರೆ ಅದೆಲ್ಲವನ್ನು ಅಚ್ಚು ಹಾಕಿಸಿ, ಗೊಂಡೆಗೆ ಅಂಟಿಸಿ ಚುನಾವಣೆ ಮಾಡಿಸಿದ್ದಾನೆ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬೇಳಲಿಕ್ಕೆ ಅವಕಾಶ ಮಾಡಿಕೊಡಿ. ಅವರದು ಅಲಿಗೇಷನ್ ಏನೆಂದರೆ ಕೇಸನ್ನು ಯಾವ ಸೆಕ್ಷನ್ ಪ್ರಕಾರ ದಾಖಲು ಮಾಡಬೇಕೊಗಿತ್ತೋ ಆ ಪ್ರಕಾರ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಶಿವಶಂಕರಪ್ಪಗೌಡ ಶಿರವಾಲ್.—ನಾನು ನನ್ನ ಮತದಾರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ತಾವು ಕುಳಿತುಕೊಳ್ಳಿ ಅವರು ಹೊಸಬರು ಇದ್ದಾರೆ, ತಮ್ಮ ಹಾಗೆ ಹಳಬರಲ್ಲ,

ಶ್ರೀ ಶಿವರಂಕರಪ್ಪಗೌಡ ಶಿರವಾಲ್.—ಈ ಘಟನೆಗೆ ಸಂಬಂದಪಟ್ಟ ಫೋಟೋಗಳನ್ನು ಕೊಟ್ಟಿದ್ದೇನೆ, ಈ ಕೇಸ್‌ನಲ್ಲಿ ಪಿ. ಎಸ್. ಐ. ಇನ್‌ವಾಲ್ವ್ ಆಗಿದ್ದಾನೆ. ಕೆಸು ದಾಖಲು ಮಾಡುವಾಗ ಸರಿಯಾದ ರೀತಿಯಲ್ಲಿ ಮಾಡಿಲ್ಲ. ಆತನನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ಆಥವಾ ಪರ್ಯಾಪಣೆ

ಮಾಡಬೇಕು, ಇಲ್ಲದಿದ್ದರೆ ಮಂಡಲ ಪಂಚಾಯಿತಿ ಚುನಾವಣೆ ಮಾಡುವ ಹಾಗೆಯೇ ಇಲ್ಲವೆಂದು ಹೇಳುತ್ತಿದ್ದೇನೆ. ಶಂಕರಮಣಕೇರಿ ಅವರ ಬಗ್ಗೆ ವರದಿ ತರಿಸಿ, ೫೦೬ ಸೆಕ್ಷನ್‌ಗೆ ಕೆಲವು ಸೆಕ್ಷನ್‌ಗಳನ್ನು ಇನ್‌ಕ್ಲೂಡ್ ಮಾಡಿ. ನಾನ್‌ಬೇಲ್ ಕೇಸ್ ಹಾಕಿದ್ದಾರೆ. ಅದನ್ನು ಬೇಲ್ ಕೇಸ್ ಮಾಡಬೇಕೆಂದು ಒತ್ತಾಯಪಡುತ್ತಿದ್ದೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಇದರ ಮುಖ್ಯ ಉದ್ದೇಶ ಡಿಸ್‌ಕ್ವಾಲಿಫೈ ಮಾಡಬೇಕೆನ್ನುವುದು.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಮುಂದಿನ ಸಲಕ್ಕೆ ಅವರನ್ನು ಡಿಸ್‌ಕ್ವಾಲಿಫೈ ಮಾಡಿ.

ಶ್ರೀ ಅಬ್ದುಲ್‌ನಜೀರ್‌ಸಾಬ್ — ಇಲ್ಲಿ ಯಾವ ಸೆಕ್ಷನ್‌ಲ್ಲಿ ಕೇಸ್ ಹಾಕಲಿಕ್ಕೆ ಹೋಗಿಲ್ಲ ಎಂಬುದನ್ನು ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಉಪನಾಯಕರು ಹೇಳಿದ್ದಾರೆ. ಅದನ್ನು ನಾನ್ನು ಪರಿಶೀಲನೆ ಮಾಡಿಸುತ್ತೇನೆ. ಎರಡನೆಯದು ಜಿಲ್ಲಾಪರಿಷತ್ ಸದಸ್ಯರು ಯಾರಿದ್ದಾರೆ, ಅವರನು ಡಿಸ್‌ಕ್ವಾಲಿಫೈ ಮಾಡಬೇಕೆಂದು ಹೇಳಿದ್ದಾರೆ. ಕಾನೂನಿನಲ್ಲಿ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಅಪರಾಧ ಸಾಬೀತಾಗುವವರೆಗೆ, ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಯಾವ ಸೆಕ್ಷನ್ ಪ್ರಕಾರ ಇದು ಸಾಬೀತು ಆಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಇದು ಸ್ಪಷ್ಟವಾಗಿಲ್ಲ. ಒಬ್ಬ ಪೋಲೀಸ್ ಅಧಿಕಾರಿಯ ಕುಮ್ಮಕ್ಕು ಇದೆ. ಅವರು ಕರ್ತವ್ಯ ನಿರ್ವಹಣೆ ಮಾಡಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೆ ಈ ಕಡೆಯ ನಮ್ಮ ಮಿತ್ರರು ಚುನಾವಣಾಧಿಕಾರಿಯ ಬಗ್ಗೆ ಹೇಳಿದ್ದಾರೆ. ಮಾನ್ಯ ಖರ್ಗೆಯವರ ಮಾತನ್ನು ನಾನು ನಂಬಬೇಕಾದರೆ ಈ ಕಡೆಯವರು ಹೇಳಿದ್ದನ್ನು ಸಹ ನಂಬಬೇಕಾಗುತ್ತದೆ, ಅವರು ಹೇಳಿದ್ದು ಸಹ ಸತ್ಯವೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನಾವು ಒಪ್ಪುವುದಿಲ್ಲ.

ಅಧ್ಯಕ್ಷರು.—ಅವರು ಮೊದಲು ಉತ್ತರ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳಿದ್ದನ್ನು ಒಪ್ಪಬೇಕು, ಇವರು ಹೇಳಿದನ್ನೂ ಒಪ್ಪಬೇಕು...

ಅಧ್ಯಕ್ಷರು.— ಅವರು ಉತ್ತರ ಹೇಳಲಿಕ್ಕೆ ಅವಕಾಶ ಕೊಡಿ. ನಾನು ನಿಮಗೆ ಮತ್ತೆ ಅವಕಾಶ ಕೊಡುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಸಾಕಷ್ಟು ಉತ್ತರ ಹೇಳಿದ್ದೇನೆ. ಒಂದು ಗಮನ ಸೆಳೆಯುವ ಸೂಚನೆ ಇಷ್ಟೊಂದು ಪ್ರಮಾಣದಲ್ಲಿ ಚರ್ಚೆಯ ವಿಷಯವಾಗಿ ಪರಿಣಮಿಸುವುದಾದರೆ ನನಗೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದಲ್ಲಿ ಇರತಕ್ಕಂಥ ಮಾಹಿತಿಯನ್ನು ಸಭೆಯ ಮುಂದಿಟ್ಟಿದ್ದೇನೆ. ಇವರು ಹೇಳಿದ್ದು ಮಾತ್ರ ನಂಬಬೇಕು ಎಂದರೆ ಸಾಧ್ಯವಿಲ್ಲ. ನನ್ನ ಇಲಾಖೆಯಿಂದ ಉನ್ನತ ಪಟ್ಟದ ಸರ್ಕಾರಿ ಅಧಿಕಾರಿಯನ್ನು ಕಳುಹಿಸಿ ಎರಡೂ ಕಡೆಯ ದೂರುಗಳನ್ನು ವಿಚಾರಣೆ ಮಾಡಿಸುತ್ತೇನೆ. ತಪ್ಪಿತಸ್ಥ ಅಧಿಕಾರಿಯಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ೨೭ನೇ ತಾರೀಕು ಮಂಡಲ್ ಪಂಚಾಯತ್ ಎಲೆಕ್ಷನ್ ಇದೆ. ಸಂಬಂಧಪಟ್ಟ ಅಧಿಕಾರಿ ಅಲ್ಲಿ ಇದ್ದರೆ ತೊಂದರೆಯಾಗುತ್ತದೆ ಎಂದು ನಾವು ಕೇಳುವಾಗ, ಇವರು ಹೇಳಿದ್ದಾರೆ, ಅವರು ಹೇಳಿದ್ದಾರೆ, ಎಂದರೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—೨೨-೩-೮೭ರಂದು ಚುನಾವಣೆ ಇರತಕ್ಕದ್ದು. ಉನ್ನತ ಅಧಿಕಾರಿಯನ್ನು ಕಳುಹಿಸಿ ತನಿಖೆ ಮಾಡಿಸುತ್ತೇನೆ. ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂಟು ದಿವಸ ಆಯಿತು. ಎನ್‌ಕ್ವೈರಿ ಮಾಡಿಸಲಿಕ್ಕೆ ಪೋಟೋಗಳನ್ನು ಕೊಟ್ಟಿದ್ದೇನೆ. ಶ್ರೀ ಶಿವಶೇಖರಪ್ಪಗೌಡ ಶಿರವಾಲ್ ಅವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದ ಪ್ರತಿಯನ್ನು ಕೊಟ್ಟಿದ್ದೇನೆ. ಆದರೂ ಕೂಡ ಏನೂ ಮಾಡಿಲ್ಲ. ಹಳ್ಳಿಗಳಲ್ಲಿ ಇವರು ಜನರನ್ನು ಹೆದರಿಸುತ್ತಿದ್ದಾರೆ,.....

ಶ್ರೀ ಅಬ್ದುಲ್ ನಜೀರ್ ಸಾಬ್.—ಚುನಾವಣಾ ಅಧಿಕಾರಿಯನ್ನು ಕಳುಹಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಚುನಾವಣಾಧಿಕಾರಿಯನ್ನು ಕಳುಹಿಸುತ್ತೇನೆ, ಎನ್‌ಕ್ವೈರಿ ಮಾಡಿಸುತ್ತೇನೆ. ಎಂದಾ ಅಸೆಂಬ್ಲಿಯೊಳಗೆ ಉತ್ತರ ಕೊಡುತ್ತಿದ್ದಾರೆ. ಅವರ ಛೇಂಬರ್ ಒಳಗೆ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೇಳತಕ್ಕದ್ದು ಇಷ್ಟೆ. ೨೨ನೇ ತಾರೀಖ್ನಿ ಚುನಾವಣೆ ಇದೆ.ಚುನಾವಣೆಇದ್ದಾಗ ಪ್ರಚಾರಕ್ಕೆ ಹೋಗಬೇಕಾಗುತ್ತದೆ. ನಾನು ಈಗಾಗಲೇ ಪರದಿ ಕೊಟ್ಟಿರುತ್ತೇನೆ. ಇಲ್ಲಿಯವರೆಗೂ ಕ್ರಮತೆಗೆದುಕೊಂಡಿಲ್ಲ. ನೀವು ಕೊಟ್ಟಿಂಥ ಸ್ಟೇಟ್ಮೆಂಟ್ನಲ್ಲೂ ಅವರ ಹೆಸರು ಇದೆ. ಎಫ್.ಐ.ಆರ್ನಲ್ಲೂ ಅವರ ಹೆಸರು ಇದೆ, ಯಾರೋ ಒಬ್ಬ ಸದಸ್ಯರು ಅವನಿಗೆ ಬೆಂಬಲ ಕೊಡುತ್ತಾರೆಂದು ಹೇಳಿದಿರಿ. Then why you have given this statement This statement has no value then,

MR. SPEAKER.—The matter is closed.

SRI MALLIKAR UNA KHARGE.—You stick on to the statement made. ಈ ಸ್ಟೇಜ್ ಮೆಂಟ್ಗೆ ನೀವು ಸ್ಟಿಕಆನ್ ಆಗಿರುವುದಿಲ್ಲ.

ಶ್ರೀ ಆಬ್ದುಲ್ ನಜೀರ್ ಸಾಬ್.—ಈ ಸದನದ ಸದಸ್ಯರು, ಯಾರೂ ಅಲ್ಲ. ಇವತ್ತು ನೀವು ಹೇಳುವುದಕ್ಕೆ ಏನು ಹಕ್ಕು ಇದೆಯೋ, ಹಾಗೆಯೇ ಇವರಿಗೂ ಹಕ್ಕು ಇದೆ.

(Intrupitions)

MR. SPEAKER.—I have closed the matter. Now nothing will go on record. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಎನ್ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ನ್ಯಾಯ ಸಿಗಲಿಲ್ಲ ಎಂದರೆ ನಾನು ಹೀಗೆಯೇ ನಿಂತು ಕೊಳ್ಳಬೇಕಾಗುತ್ತದೆ. ನಾನು ಮೊದಲನೆಯ ಅಪ್ಲಿಕೇಷನ್ ಸಲ್ಲಿಸಿದ್ದೇನೆ. ಅದರೂ ಇವತ್ತು ವಿಚಾರಣೆ ಮಾಡಿಸುತ್ತೇನೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ವಿಚಾರಣೆ ಮಾಡಿಸುವುದಿಲ್ಲ ಎಂದು ಹೇಳಿದ್ದರೆ, ನಿಮ್ಮ ಮಾತನ್ನು ಒಪ್ಪುತ್ತೇನೆ. ಇದ್ದರಿಂದ ಖರ್ಗೆಯವರೇ, ನೀವು ಮತ್ತು ಅವರೂ ಎಲ್ಲರೂ ಕೂಡಿ ಡಿಸ್ಕಸ್ ಮಾಡಿ. ಚೀಫ್ ಮಿನಿಸ್ಟರೂ ಬಂದಿದ್ದಾರೆ ಅವರ ಪತ್ತಿರವೂ ಡಿಸ್ಕಸ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಗೂಂಡಾಗಿರಿ ಮಾಡಿ ಹೋಗಿ ಸುಟ್ಟು ಹಾಕಿದಂಥ ಪ್ರೂಫ್ ಇದೆ. ನೀವು ನಿಮ್ಮ ಸ್ಟೇಟ್ಮೆಂಟ್ಗೆ ಸ್ಟಿಕನ್ ಆಗಿರುವುದಿಲ್ಲ. ಇದನ್ನು ೮ ದಿವಸಗಳಲ್ಲಿ ಪ್ರೀಪೇರ್ ಮಾಡುವುದಕ್ಕಾಗುತ್ತದೆಯೇ ? ಮಂಡಲ್ ಪಂಚಾಯ್ತಿಗೆ ನಿಂತಿರುವವರು ಮನೆಯಿಂದ ಹೊರಗೆ ಬರುವಂತಿಲ್ಲ. ನ್ಯಾಯವಾಗಿ ನಡೆದು ಕೊಂಡರೆ ಅವಕಾಶ ಸಿಗುವುದಿಲ್ಲವೆಂದು ಅರ್ಥವೇ ?

ಅಧ್ಯಕ್ಷರು.—ಇದು ಗಮನಸೆಳೆಯುವ ಸೂಚನೆ. ಎಲ್ಲದಕ್ಕೂ ರೂಲ್ಸ್ ರೆಗ್ಯುಲೇಷನ್ಸ್ ಇವೆ. ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ವಿಚಾರಣೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು. The matter is closed now.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಸಾಕಷ್ಟು ಸಮಯ ಕೊಟ್ಟಿದ್ದೀರಿ. ನಾನು ತಪ್ಪು ಮೂಲಕವೇ ಫೋಟೋ ಕೂಡ ಕೊಟ್ಟಿದ್ದೇನೆ. ಈಗಾಗಲೇ ೮ ದಿವಸಗಳ ಹಿಂದೆಯೇ ಕೊಟ್ಟಿದ್ದೇನೆ. ಇವತ್ತಿನವರೆಗೂ ಎನ್ಕ್ವೈರಿ ಮಾಡಿಸಿಲ್ಲ. ಸುಟ್ಟಂಥ ನಾಮಿನೇಷನ್ ಪೇಪರ್ಸ್ ಎಲ್ಲಾ ಕೊಟ್ಟಿದ್ದೇನೆ. ಇದಕ್ಕೆ ಎಷ್ಟು ದಿವಸ ಬೇಕು.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಾವು ಹೋಗಬೇಕಾಗುತ್ತದೆ. ನೀವು ವಿರೋಧಪಕ್ಷದ ಉಪ ನಾಯಕರೇ. (Interrputions) Nothing will go on record.

ಶ್ರೀ ಆಬ್ದುಲ್ ನಜೀರ್ಸಾಬ್.—ಅಧ್ಯಕ್ಷರೇ, ಸರ್ಕಾರದ ಪರವಾಗಿ ಇರತಕ್ಕಂಥ ಮಾಹಿತಿಯನ್ನು ನಾನು ಈಗಾಗಲೇ ಹೇಳಿದ್ದೇನೆ. ಚರ್ಚೆಯ ಕಾಲದಲ್ಲಿ ಆ ಕಡೆಯ ಸದಸ್ಯರು ಈ ಕಡೆಯ ಸದಸ್ಯರೂ ಏನು ವಾದಪನ್ನು ಮಂಡಿಸಿದ್ದಾರೆ. ಅದರ ಬಗ್ಗೆ ಎನ್ಕ್ವೈರಿ ಮಾಡಿಸುತ್ತೇನೆ. ಚುನಾವಣಾ ಅಧಿಕಾರಿ ಪಕ್ಷಪಾತ ಮಾಡಿದ್ದಾನೆಂದರೆ ಅವನನ್ನು ಬಿಟ್ಟುಬಿಡುವುದಕ್ಕಾಗುತ್ತದೆಯೇ?

SRI MALLIKARJUNA KHARGE.—I want you to stick to the statement made.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಆವನ ಪರವಾಗಿ ಹೇಳಿದೆವು ಎಂದು ಅಲ್ಲ, ನಾಮಿನೇಷನ್ ಪೇಪರನ್ನು ತಂದು ಸುಡುತ್ತಾನೆ ಎಂದರೆ ಇದು ಸರಿಯೇ ?

ಅಧ್ಯಕ್ಷರು.—ನೀವು ಸಬ್‌ಇನ್ಸ್‌ಪೆಕ್ಟರ್ ಹಾಗೆ ವರ್ತಿಸಿದ ಎಂದು ಹೇಳಿದ್ದೀರಿ, ರಿಟರ್ನಿಂಗ್ ಆಫೀಸರ್ ಹಾಗೆ ವರ್ತಿಸಿದ ಎಂದು ಅವರು ಹೇಳಿದ್ದಾರೆ. ಇಬ್ಬರೂ ಹೇಳಿರುವುದನ್ನು ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಅವರು ಹೇಳಿದ್ದಾರೆ, ಎನ್‌ಕ್ವೈರಿ ಮಾಡಿಸುತ್ತಾರೆ, ತಪ್ಪಿಸ್ಥರು ಇದ್ದರೆ ಹ್ಯಾಂಗ್ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮುಂದಿನ ತಿಂಗಳು ೨೨ನೇ ತಾರೀಖು ಚುನಾವಣೆ ಇದೆ ಎಂದು ಹೇಳಿದ್ದಾರೆ. ನಾನು ಈಗಾಗಲೇ ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ ಎಂದು ಹೇಳಿರುತ್ತೇನೆ. ಉನ್ನತಾಧಿಕಾರಿಗಳ ಮುಖಾಂತರ ತನಿಖೆಮಾಡಿಸುತ್ತೇನೆ, ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇನೆ, ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯುವಂತೆ ನೋಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದಕ್ಕೂ ಹೆಚ್ಚು ಅಷ್ಯೂರೆನ್ಸ್ ಏನು ಬೇಕು ಹೇಳಿ. ಉನ್ನತಾಧಿಕಾರಿಗಳಿಂದ ತನಿಖೆ ಮಾಡಿಸುತ್ತೇನೆ, ಯಾರು ತಪ್ಪಿತಸ್ಥ ಅಧಿಕಾರಿಗಳು ಇದ್ದಾರೆ, ಸಬ್‌ಇನ್ಸ್‌ಪೆಕ್ಟರ್ ಆಯಿತು, ರಿಟರ್ನಿಂಗ್ ಆಫೀಸರ್ ಆಯಿತು, ಅವರ ಮೇಲೆ ಎನ್‌ಕ್ವೈರಿ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ಎನ್‌ಕ್ವೈರಿ ಮಾಡಿ, ಬೇಡ ಎಂದು ಹೇಳುವುದಿಲ್ಲ. ಅದೇ ಅಫಿಷಿಯಲ್ ಇದ್ದು ಎಲೆಕ್ಷನ್ ಮಾಡಿದರೆ ಅದು ಸರಿಯಾಗಿ ನಡೆಯುವುದಿಲ್ಲ.

ಅಧ್ಯಕ್ಷರು.—ಅವರು ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ರಾಜಕೀಯ ದುರುದ್ದೇಶ ಇದೆ.

ಅಧ್ಯಕ್ಷರು.—ತಾವು ಅವರ ಛೇಂಬರ್‌ಗೆ ಹೋಗಿ ಕನ್‌ವಿನ್ಸ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಿಮ್ಮ ಮುಖಾಂತರ ಎಂಟು ದಿವಸದ ಹಿಂದೆ ಅವರಿಗೆ ವಿವರ ಕೊಟ್ಟಿದ್ದೇನೆ.

ಅಧ್ಯಕ್ಷರು.—ಸರಿಯಾದ, ಯೋಗ್ಯವಾದ ರೀತಿಯಲ್ಲಿ ಅವರು ಉತ್ತರ ಕೊಟ್ಟಿದ್ದಾರೆ. ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸುತ್ತೇವೆಂದು ಹೇಳಿದ್ದಾರೆ. ಇದಕ್ಕೂ ಒಳ್ಳೆಯ ಉತ್ತರವನ್ನು ಯಾವ ಮಂತ್ರಿಗಳು ಕೊಡುತ್ತಾರೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯೋಗ್ಯವಾದ ರಿಪ್ಲೈ ಎಂದು ತಾವೇ ಜಡ್ಜ್‌ಮೆಂಟ್ ಕೊಟ್ಟರೆ ನಾವು ಏನು ಕೇಳಬೇಕು? ತಾವೇ ಈ ರೀತಿಯಾಗಿ ಜಡ್ಜ್‌ಮೆಂಟ್ ಕೊಟ್ಟರೆ ನಾವು ಏನು ಕೇಳಬೇಕು ಹೇಳಿ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ತಾವು ದಯವಿಟ್ಟು ಕುಳಿತುಕೊಳ್ಳಿ, ತಾವು ಈಗ ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. You are taking un-due advantage ಇದು ಒಳ್ಳೆಯದಲ್ಲ. ತಾವು ಈಗ ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಅವರು ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ವಿರೋಧ ಪಕ್ಷದ ಉಪನಾಯಕರು ಈ ರೀತಿ ಹೇಳುವುದು ಸರಿಯಲ್ಲ. ಎಂಟು ದಿವಸದ ಹಿಂದೆ ಏನೋ ಹೇಳಿದ್ದೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಬೇರೆ ನಿಯಮಗಳು ಇವೆ. ಆ ನಿಯಮದ ಮುಖಾಂತರ ಅದನ್ನು ತೆಗೆದುಕೊಂಡು ಬನ್ನಿ, ಈ ಸದನದ ಮುಂದೆ ತನ್ನಿ, ಚರ್ಚೆ ಮಾಡೋಣ, ಆದರೆ ಒಂದು ವರ್ಷದ ಹಿಂದೆ ಹೇಳಿದುದನ್ನು ಹ್ಞಾಪಿಸಿಕೊಂಡು ಅದನ್ನು ಹೇಳುವುದು ಸರಿಯಲ್ಲ. ನವಂಗೆ ಪಕ್ಷಾತ್ರ ನಿಯಮಗಳು ಇದೆ, ನಿಮಗೆ ನಿಯಮಗಳು ಇಲ್ಲವೇ, ನಿಯಮಗಳನ್ನು ಗಾಳಿಗೆ ತೂರಬೇಡಿ, ಅದನ್ನು ವಿಚಾರದ ರೂಪದಲ್ಲಿ ತನ್ನಿ, ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಅವರು ಉತ್ತರ ಕೊಟ್ಟಿದ್ದಾರೆ. ನಿಮಗೆ ಎಲ್ಲಾ ಗೊತ್ತಿದೆ ಹೊಸಬರಿಗಾದರೆ ಏನೋ ಹೋಗಲಿ ಎಂದು ಹೇಳಬಹುದಾಗಿತ್ತು. ನೀವು ಮಾಜಿ ಮಂತ್ರಿಗಳು ಮತ್ತು ವಿರೋಧ ಪಕ್ಷದ ಉಪನಾಯಕರು. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ, ಸರಕಾರದವರು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟಮೇಲೆ I have colsed the matter.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದೂ ಹೇಳಿದ್ದೀರಿ.

ಅಧ್ಯಕ್ಷರು.—ತಾವು ಬೇರೆ ನೋಟೀಸ್ ಕೊಡಿ, ನೋಡೋಣ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾರ್ಪಣೆ ನಿರ್ಣಯದ ಮೇಲಿನ ಚರ್ಚೆ

(ಮುಂದುವರಿದ ಚರ್ಚೆ)

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ವಿಧಾನ ಮಂಡಲದಲ್ಲಿ ರಾಜ್ಯಪಾಲರು ದಯಪಾಲಿಸಿದ ಭಾಷಣ ಕೇವಲ ಔಪಚಾರಿಕವಾದ ಭಾಷಣವಾಗಿದೆ. ಇದನ್ನು ಸಮರ್ಥನೆ ಮಾಡುತ್ತಾ, ಅನುಮೋದನೆ ಮಾಡುತ್ತಾ, ಆಡಳಿತ ಪಕ್ಷದ ಮಾಜಿ ಸಚಿವರುಗಳು ಮಾತನಾಡಿ, ರಾಜ್ಯಪಾಲರು ಏನು ಭಾಷಣವನ್ನು ಮಾಡಿದ್ದಾರೆ, ಅಲ್ಲಿರುವಂತಹ ವಿಷಯಕ್ಕಿಂತ ಹೆಚ್ಚಾಗಿ, ಹೆಚ್ಚು ವಿಷಯಗಳ ಬಗ್ಗೆ ಮಾತನಾಡುತ್ತಾ, ಮುಂದೆ ಏನೆಲ್ಲಾ ಕಾರ್ಯಕ್ರಮಗಳು ನಡೆಯಬೇಕೆನ್ನುವುದರ ಸಂಗತಿಗಳನ್ನು ಅವರು ತಿಳಿಸಿದ್ದಾರೆ. ನಾನು ಅಂದುಕೊಂಡಿದ್ದೇನೆ, ರಾಜ್ಯಪಾಲರ ಭಾಷಣದಲ್ಲಿ ಇದುವರೆಗೆ ಸರ್ಕಾರ ಏನೆಲ್ಲ ಕಾರ್ಯಕ್ರಮ ಮಾಡಿದೆ, ಎಷ್ಟು ಪ್ರಗತಿ ಸಾಧಿಸಿದೆ, ಮುಂದೆ ಬರುವಂತಹ ವರ್ಷಗಳಲ್ಲಿ ಏನು ಮಾಡುತ್ತದೆ, ಏನು ಹೊಸ ಕಾರ್ಯಕ್ರಮಗಳನ್ನು ಸರಕಾರ ಹಾಕಿಕೊಳ್ಳುವುದು ಇದೆ ಎಂಬ ಸಂಗತಿಗಳನ್ನು ಹೇಳಲಾಗುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ ಆ ರೀತಿಯ ಯಾವುದೇ ವಿಷಯಗಳೂ ಇಲ್ಲಿ ಇಲ್ಲ. ಒಂದು ವಿಷಯದಲ್ಲಿ ನಾನು ಸನ್ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಹೊಸ ಹೊಸ ಯೋಜನೆಗಳನ್ನು ಘೋಷಣೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಆ ರೀತಿಯ ಯಾವುದೇ ಹೊಸ ಘೋಷಣೆ, ಹೊಸ ಹೊಸ ಕಾರ್ಯಕ್ರಮಗಳು ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಸ್ವಾಮಿ ರಾಜ್ಯಪಾಲರ ಭಾಷಣದ ಮೊದಲನೆಯ ಪುಟದಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಅದೇನೆಂದರೆ ಮಧ್ಯೆ ದೀರ್ಘಕಾಲದವರೆಗೆ ಮಳೆ ಬೀಳದ ಕಾರಣ ಕಾತರ ಉಂಟಾಗಿದ್ದರೂ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸರಾಸರಿ ಅಥವಾ ಸರಾಸರಿಗಿಂತಲೂ ಹೆಚ್ಚು ಮಳೆಯಾಗಿದೆ ಎನ್ನುವ ಮಾತನ್ನು ಹೇಳಿದ್ದೀರಿ. ಅದೇ ಪುಟದಲ್ಲಿ ಮತ್ತೊಂದು ವಾಕ್ಯದಲ್ಲಿ ಏನು ಹೇಳಿದ್ದೀರಿ ಎಂದರೆ ಅನೇಕ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಡಿಮೆ ಮಳೆಯಾಗಿತ್ತು. ಈ ಸಲ ಸಾಕಷ್ಟು ಮಳೆಯಾಗದ ಕಾರಣ ಅನಿರೀಕ್ಷಿತವಾಗಿ ಮಲೆನಾಡು ಜಿಲ್ಲೆಗಳು ತೊಂದರೆಗೀಡಾಗಬೇಕಾಯಿತು. ಇಂಥ ಪರಿಮಿತಿಗಳಿದ್ದರೂ ಸಹ ರಾಜ್ಯದಲ್ಲಿ ಬೆಳೆ ಉತ್ಪಾದನೆ ತೃಪ್ತಿದಾಯಕವಾಗಿದೆಯೆನ್ನಬಹುದು ಎಂದು ಹೇಳಿದ್ದೀರಿ. ಒಂದು ಕಡೆ ಹೇಳಿದ್ದೀರಿ ಮಳೆ ಇಲ್ಲ ಎಂದು, ಮತ್ತೊಂದು ಕಡೆ ಹೇಳುತ್ತೀರಿ ಮಲೆನಾಡು ಪ್ರದೇಶಗಳಲ್ಲಿ ಕೂಡ ಸಾಕಷ್ಟು ತೃಪ್ತಿಯಾಗುವ ರೀತಿ ಮಳೆಯಾಗಿಲ್ಲವೆಂದು, ಹೀಗಿದ್ದರೂ ಸಹ ರಾಜ್ಯದಲ್ಲಿ ಉತ್ಪಾದನೆ ತೃಪ್ತಿಕರವಾಗಿದೆಯೆಂದೂ ಹೇಳಿದ್ದೀರಿ. ಇದು ಹೇಗೆ ಸಾಧ್ಯವಾಗುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಬಹಳ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೇಳಿದ್ದಾರೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಭೀಕರವಾದಂಥ ಬರಗಾಲವಿದ್ದುದರಿಂದ ಶೇಕಡ ೬೦ರಷ್ಟು ರಾಜ್ಯಕ್ಕೆ ಆದಾಯದ ಕೊರತೆಯುಂಟಾಗಿದೆ ಇದರಿಂದ ಸಮ್ಮ ರಾಜ್ಯದ ಬೊಕ್ಕಸಕ್ಕೆ ತೊಂದರೆಯಾಗಿದೆ ಎನ್ನುವ ಮಾತನ್ನು ಸಹ ಹೇಳಿದರು. ಸ್ವಾಮಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಕಳಕಳಿಯ ಮನವಿ ಮಾಡಿಕೊಳ್ಳುವುದೇನೆಂದರೆ ಕಳೆದ ೩-೪ ವರ್ಷಗಳಿಂದ ಭೀಕರವಾದಂಥ ಬರಗಾಲ ಪರಿಸ್ಥಿತಿ ಇದ್ದೂ ಶೇಕಡ ೬೦ರಷ್ಟು ಆದಾಯ ರಾಜ್ಯದ ಬೊಕ್ಕಸಕ್ಕೆ ಕಡಿಮೆಯಾಗಿರುವಂತಹ ಸಂದರ್ಭದಲ್ಲಿ ಈ ರಾಜ್ಯದ ರೈತನ ಪರಿಣಾಮ ಅವನ ಸಂಕಷ್ಟವನ್ನು ಸರ್ಕಾರ ಗಮನಿಸಿರಬೇಕೆಂದು ನಾನು ಭಾವಿಸಿರುತ್ತೇನೆ. ಈ ರಾಜ್ಯದಲ್ಲಿ ಯಾವುದಾದರೊಂದು ಹೊಸ ಸರ್ಕಾರ ಅಧಿಕಾರಕ್ಕೆ ಬಂದರೆ ರಾಜ್ಯದ ಜನತೆ ಅಂದುಕೊಳ್ಳುತ್ತಾರೆ ಈ ಸರ್ಕಾರ ಬಡವರ ಏಳಿಗೆಗಾಗಿ, ರೈತರ ಅಭಿವೃದ್ಧಿಗಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು, ಹಿಂದಿಗಿಂತ ಹೆಚ್ಚು ಸಾಧನೆಯನ್ನು ಮಾಡಬಹುದು, ಜನತೆಯ ಕಲ್ಯಾಣವಾಗಬಹುದು,

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.